ಎಲ್ಲಾ ಕಲುಷಿತಗೊಳ್ಳುತ್ತವೆ ಮತ್ತು ಮಕ್ಕಳ ಮೇಲೆ ಒತ್ತಡಗಳು ಹೆಚ್ಚುತ್ತವೆ ಎನ್ನುವ ಸತ್ಯ ಕಣ್ಣೆದುರಿಗೆ ಕಾಣುತ್ತಿದ್ದರೂ ಅದನ್ನೆಲ್ಲಾ ಪೋಷಕರು ಕಡೆಗಣಿಸುತ್ತಿದ್ದಾರೆ.

## ಪೋಷಕರ ಆತಂಕಗಳು

ಮಕ್ಕಳ ವಿಷಯದಲ್ಲಿ ಪೋಷಕರ ಆತಂಕಗಳು ಹಲವಾರು. ಶಾಲೆಯ ಓದಿನಲ್ಲಿ ತಮ್ಮ ಮಕ್ಕಳು ಮುಂದಿದ್ದು ಒಳ್ಳೆಯ ಕಾಲೇಜಿನಲ್ಲಿ ಒಳ್ಳೆಯ ಕೋರ್ಸಿಗೆ (ಇಲ್ಲಿ ಒಳ್ಳೆಯದು ಎಂದರೆ ಪೋಷಕರು ಇಷ್ಟಪಡುವುದು ಎಂದು ಅರ್ಥ!) ಸೇರಬೇಕು ಎನ್ನುವುದು ಸಾಮಾನ್ಯವಾಗಿ ಎಲ್ಲಾ ಪೋಷಕರಿಗೂ ಇರುವ ಆತಂಕವಾದರೆ ಹೆಚ್ಚಿನವರಿಗೆ ಇಷ್ಟೇ ಸಾಕಾಗುವುದಿಲ್ಲ ಎನ್ನಿಸುತ್ತದೆ. ಇವತ್ತಿವ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳಿಗೆ ಭಾಷೆ (ಅಂದರೆ ಇಂಗ್ಲಿಷ್) ಚೆನ್ನಾಗಿ ಬರಬೇಕು, ಅವರಲ್ಲಿ ಶಿಸ್ತು ಇರಬೇಕು, ಮಕ್ಕಳು ದಾರಿ ತಪ್ಪಬಾರದು (ಅಂದರೆ ಪೋಷಕರು ಹೇಳುವ ದಾರಿಯಲ್ಲಿ ಮಾತ್ರ ಹೋಗಬೇಕು) ಹೀಗೆ ಮಕ್ಕಳ ಬಗೆಗಿನ ಪೋಷಕರ ಅಪೇಕ್ಷೆ ಹನುಮಂತನ ಬಾಲದಂತೆ ಬೆಳೆಯುತ್ತಲೇ ಇರುತ್ತದೆ. ವಿಪರ್ಯಾಸವೆಂದರೆ ತಮ್ಮೊಳಗಿನ ಇಂತಹ ಅಪೇಕ್ಷೆ, ಆತಂಕಗಳನ್ನೇ ಪೋಷಕರು ಮಕ್ಕಳ ಮೇಲಿನ ತಮ್ಮ ಪ್ರೀತಿ ಮತ್ತು ಕಾಳಜಿ ಎಂದುಕೊಂಡಿದ್ದಾರೆ.

ತಂದೆ–ತಾಯಿಗಳ ದೃಷ್ಟಿಯಲ್ಲಿನ ಈ ಪ್ರೀತಿ, ಕಾಳಜಿ ಮಕ್ಕಳಿಗೆ ಅವರ ಭಾವೀ ವೃತ್ತಿ, ಕೌಟುಂಬಿಕ ಮತ್ತು ಸಾಮಾಜಿಕ ಜೀವನಕ್ಕೆ ನಿಜವಾಗಿ ಸಹಕಾರಿಯಾಗುತ್ತಿದೆಯೇ? ಅಥವಾ ಅತಿಯಾದ ಈ ಕಾಳಜಿಯೇ ಮಕ್ಕಳ ಮೇಲಿನ ಒತ್ತಡವಾಗಿ ಪರಿವರ್ತನೆಯಾಗುತ್ತಿದೆಯೇ? ಇಂತಹ ಒತ್ತಡ ಪೋಷಕರ ಮತ್ತು ಮಕ್ಕಳ ಸಂಬಂಧದಲ್ಲಿ ತುಂಬಲಾಗದ ದೊಡ್ಡ ಬಿರುಕನ್ನು ಮೂಡಿಸುತ್ತಿದೆಯೇ? ಎಲ್ಲರೂ ಹೇಳುವಂತೆ ಇದು 'ಜನರೇಶನ್ ಗ್ಯಾಪ್' ಎಂದುಕೊಂಡು ಪೋಷಕರು ಸುಮ್ಮನಿರಬೇಕೇ? ಮಕ್ಕಳ ಭವಿಷ್ಯದ ಬಗೆಗಿನ ಪೋಷಕರ ಆತಂಕದಿಂದಾಗಿ ಅವರು ಮುಂದೆ ವೃತ್ತಿಯಲ್ಲಿ ಯಶಸ್ವಿಯಾದರೂ ಭಾವನಾತ್ಮಕವಾಗಿ ದುರ್ಬಲರಾಗಿಯೇ ಉಳಿಯುತ್ತಾರೆಯೇ? ಈ ಎಲ್ಲಾ ಗೊಂದಲಗಳ ಮಧ್ಯೆ ಪೋಷಕರು ತಮ್ಮ ಮಿತಿಗಳಲ್ಲಿ ಏನು ಮಾಡಬಹುದು?

## ಕಳೆದುಹೋಗುವ ಬಾಲ್ಯ

ಇವತ್ತಿನ ಮಕ್ಕಳಿಗೆ ಬಾಲ್ಯ ಯಾವಾಗ ಶುರುವಾಗುತ್ತದೆ ಮತ್ತು ಯಾವಾಗ ಮುಗಿದಿರುತ್ತದೆ ಎನ್ನುವುದೇ ಗೊತ್ತಾಗುವುದಿಲ್ಲ. ಮೂರು ವರ್ಷಕ್ಕೆ ಮೂವತ್ತು ವರ್ಷದ ಪ್ರಬುದ್ಧತೆ, ಪ್ರತಿಭೆ, ಸಾಧನೆಗಳನ್ನೆಲ್ಲಾ ನಿರೀಕ್ಷಿಸುವ ಪೋಷಕರು ಅವರ ಬಾಲ್ಯವನ್ನು ಕಸಿದುಕೊಂಡಿರುತ್ತಾರೆ. ನರ್ಸರಿಗೆ ಹೋಗಲು ಪ್ರಾರಂಭಿಸಿದ ಮೇಲೆ ಮಕ್ಕಳಿಗೆ ಪ್ರೀತಿ ತೋರಿಸುವುದು ಎಂದರೆ ಅವರನ್ನು ಉತ್ತಮ ಶಾಲೆಗೆ ಕಳಿಸುವುದು, ಬೇಕಾದ ಪರಿಕರಗಳನ್ನು ಕೊಡಿಸುವುದು, ಮನೆಪಾಠಕ್ಕೆ ಕಳಿಸುವುದು, ಹೋಂವರ್ಕ್ ಮಾಡಿಸುವುದು ಮುಂತಾದವು ಮಾತ್ರ ಎಂದುಕೊಂಡಿದ್ದೇವೆ. ಇವಿಷ್ಟನ್ನು ಮಾಡಿಸುವಷ್ಟರಲ್ಲಿ ಪೋಷಕರ ಹಣ, ಸಮಯ, ಸಮಾಧಾನ, ಸಂತೋಷ ಎಲ್ಲವೂ ಖರ್ಚಾಗಿರುವಾಗ ಮಕ್ಕಳಿಗೆ ಪ್ರೀತಿಯನ್ನು ತೋರಿಸುವುದಕ್ಕೆ ಅವರಲ್ಲಿ ಏನೂ ಉಳಿದಿರುವುದೇ ಇಲ್ಲ. ಆದರೆ ಪ್ರೀತಿಯ ಅಭಿವ್ಯಕ್ತಿಯೇ ಇಲ್ಲದ ಅಥವಾ ತೋರಬಹುದಾದ ಸ್ವಲ್ಪ ಮಟ್ಟಿನ ಪ್ರೀತಿಗೂ ರ್‍ಯಾಂಕ್, ಮಾರ್ಕ್ಸ್, ಗ್ರೇಡ್‌ಗಳೇ ಮಾನದಂಡವಾಗುವ ಪರಿಸ್ಥಿತಿ ಮಕ್ಕಳ ಮೇಲೆ ಎಂತಹ ಅಗಾಧ ಒತ್ತಡವನ್ನು ಸೃಷ್ಟಿಸುತ್ತಿದೆ ಮತ್ತು ಉತ್ತಮ ಭಾವೀಪ್ರಜೆಗಳನ್ನು ಮಾಡುವ ಪ್ರಯತ್ನದಲ್ಲಿ ನಾವು ಮಕ್ಕಳ ಬಾಲ್ಯವನ್ನು ಹೊಸಕಿ ಹಾಕುತ್ತಿದ್ದೇವೆ ಎಂಬ ಅರಿವು ನಮಗಿದೆಯೇ?

ಕೆಲವು ಉದಾಹರಣೆಗಳನ್ನು ಇಲ್ಲಿ ಅವಲೋಕಿಸೋಣ.

- ಸುಮಾರು ಆರು ವರ್ಷದ ಬಾಲಕ, ಸಣ್ಣಪುಟ್ಟ ಕಲಿಕೆಯ ತೊಂದರೆ ಇದ್ದರೂ ಶಾಲಾ ಪರೀಕ್ಷೆಗಳಲ್ಲಿ 90ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸುತ್ತಿದ್ದಾನೆ. ಪೋಷಕರು ಮುಂದೆಂದಾದರೂ ತೊಂದರೆಯಾಗಬಹುದೆಂದು ಈಗಲೇ ಆಪ್ತಸಲಹೆಗೆ ಕರೆತಂದಿದ್ದಾರೆ.
- ಹದಿವಯಸ್ಸಿನ ಬಾಲಕಿ. ಓದಿನಲ್ಲಿ ಆಸಕ್ತಿ ಕಡಿಮೆಯಾಗಿದೆ ಎನ್ನುವುದು ಪೋಷಕರ ದೂರು. ಜೊತೆಗೆ ಯಾವುದೋ ಹುಡುಗನ ಜೊತೆ ಅಫೇರ್ ಇದೆ ಎನ್ನುವುದನ್ನು ಮೂರನೆಯವರಿಂದ ತಿಳಿದುಕೊಂಡಿದ್ದಾರೆ. ಅದನ್ನು

